ಕಲಿ-ಕಲಿಸು
AN ARTS EDUCATION TEACHER INITIATIVE
KALI-KALISU

An Arts Education Initiative of

Over 20 Years of Celebrating the Arts
India Foundation for the Arts
I F A

**ಕರ್ನಾಟಕ ಸರ್ಕಾರಿ ಶಾಲೆಗಳ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ**

**ಕಡೆಯ ದಿನಾಂಕ: 28th July, 2017**

ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ.ಎಫ್.ಎ) ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿ ಕಲಾ ಶಿಕ್ಷಣ ನೀಡಲು ಶಾಲಾ ಶಿಕ್ಷಕ/ಶಿಕ್ಷಕಿಯರಿಂದ ಯೋಜನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ. ಇದು ಈಗಾಗಲೇ ಚಾಲ್ತಿಯಲ್ಲಿರುವ 'ಕಲಿ–ಕಲಿಸು' ಯೋಜನೆಯ ಮುಂದುವರಿಕೆ ಭಾಗವಾಗಿದೆ. ಶಿಕ್ಷಕರು, ಶಾಲಾ ಸಮುದಾಯ ಹಾಗೂ ಸ್ಥಳೀಯ ಕಲಾವಿದರ ಸಂಬಂಧವನ್ನು ಗಟ್ಟಿಗೊಳಿಸುವುದು ಈ ಯೋಜನೆಯ ಮುಖ್ಯ ಗುರಿ.

ಈ ಅನುದಾನ ಮುಖ್ಯ ಉದ್ದೇಶವೆಂದರೆ ಶಿಕ್ಷರು ತಮ್ಮ ವಿಷಯದ ಪರಿಮಿತಿಯ ಚೌಕಟ್ಟನ್ನು ದಾಟಿ, ಕಲಾ ಪ್ರಕಾರಗಳನ್ನು ತಾವು ಕಲಿಸುತ್ತಿರುವ ವಿಷಯಗಳಲ್ಲಿ ಅಳವಡಿಸಿಕೊಳ್ಳುವುದು, ಈ ಮೂಲಕ ಎಲ್ಲಾ ವಿಷಯಗಳ ಪಠ್ಯಕ್ರಮದಲ್ಲಿ ಹಾಗು ತರಗತಿಯಲ್ಲಿ ಸ್ಥಳೀಯ ಕಲಾಪ್ರಕಾರಗಳನ್ನು ಅಳವಡಿಸಿಕೊಂಡು ಕಲಾವಿದರಿಗೆ ಹಾಗು ಶಿಕ್ಷಕರಿಗೆ ಹೊಸ ಕಲಿಕೆಯ ಅವಕಾಶವನ್ನು ಕಲ್ಪಿಸುವುದಾಗಿದೆ. ಅದರ ಜೊತೆಗೆ ಪರಿಸರ ಹಾಗೂ ಜಾನಪದ ಸಂಸ್ಕೃತಿಯನ್ನು ಶಾಲಾ ಶಿಕ್ಷಣದಲ್ಲಿ ಮತ್ತೆ ಪರಿಚಯ ಮಾಡುವ ಕೆಲಸ ಆಗಿದೆ.

ಅನುದಾನದ ಅವಧಿಯ ನಂತರವೂ ಯೋಜನಾಕಾರ್ಯಕ್ರಮವು ಮುಂದುವರೆಯಬಹುದಾದ ಎಲ್ಲಾ ಸಾಧ್ಯತೆಗಳು ಸಂಸ್ಥೆಗೆ ಇದೆ.

ಈ ಅನುದಾನಗಳ ಬಗೆಗೆ ಹೆಚ್ಚಿನ ಮಾಹಿತಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ;

https://sites.google.com/site/kalikalisu/project/phase-4---2012

**ಈ ಯೋಜನಾ ಪ್ರಸ್ತಾವಕ್ಕೆ ಬೇಕಾದ ಅರ್ಹತೆ:**

ಸರ್ಕಾರಿ ಶಾಲಾ ವಿಷಯಶಿಕ್ಷಕರು, ಕಲಾಶಿಕ್ಷಕರು, ಡಿಸ್ಟ್ರಿಕ್ಟ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್(DIET)ನ ಉಪನ್ಯಾಸಕರು.

## ಯೋಜನೆಯ ವ್ಯಾಪ್ತಿ:

- ಯೋಜನೆಯ ವ್ಯಾಪ್ತಿಯಲ್ಲಿ ಕೆಳಕಂಡ ಯಾವುದಾದರೊಂದು ಅಂಶವಿರಬೇಕು. ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು, ಕಲಾಸೇವೆಯಲ್ಲಿ ತೊಡಗಿರುವವರೂ ಒಳಗೊಂಡಂತೆ ಇನ್ನೂ ಹಲವು ಪಾಲುದಾರರನ್ನು ಕಲಾ ಯೋಜನೆಯ ಪರಿಧಿಯಲ್ಲಿ ತರಬೇಕು.
- ಬೋಧನೆಯಲ್ಲಿ ಸ್ಥಳೀಯ ಹಾಗೂ ಪ್ರಾಂತೀಯ ಕಲಾ ಪ್ರಕಾರಗಳನ್ನು ಬಳಸಿಕೊಳ್ಳುವ ಮೂಲಕ ಕಲಿಕೆಯನ್ನು ಶ್ರೀಮಂತಗೊಳಿಸುವುದು.
- ವಿದ್ಯಾರ್ಥಿಕೇಂದ್ರಿತ ಕಲಿಕೆಗೆ ಪ್ರೋತ್ಸಾಹಿಸುವುದು. ಉದಾಹರಣೆಗೆ ಕಲಾ ಪ್ರಕಾರಗಳನ್ನು ಪರಿಚಯಿಸಿ, ಮಕ್ಕಳು ವಿವಿಧ ಕಲಾ ಪ್ರಕಾರಗಳಲ್ಲಿ ನಿರಂತರವಾಗಿ ತೊಡಗುವಂತೆ ಪ್ರೋತ್ಸಾಹಿಸುವುದು.ಳ ಬಗ್ಗೆ ನಿತ್ಯ ಅನುಭಾವಿಸುವುದು ಹಾಗೂ ಹೆಚ್ಚೆಚ್ಚು ಅಭ್ಯಸಿಸುವ ಕೆಲಸ ಆಗುಮಾಡುವುದು (ರಂಗ, ಚಿತ್ರಕಲೆ, ಸಿನೆಮಾ, ಸಾಹಿತ್ಯ, ಫೋಟೋಗ್ರಫಿ, ಸಂಗೀತ ಇತ್ಯಾದಿ)
- ಈ ಯೋಜನೆಯು ಕಲಾ ಕಲಿಕೆಯ ಮೂಲಕ ಸಾಮಾಜಿಕ ನ್ಯಾಯ ಮತ್ತು ಪರಿಸರ ಸಂಬಂಧಿ ಅರಿವು

ಮೂಡಿಸಲು ಶಾಲೆ ಸಮುದಾಯವನ್ನು ಪ್ರೇರೇಪಿಸುವಲ್ಲಿ ಸಹಕಾರಿಯಾಗಬೇಕು.

**ಇತರ ಅಲ್ಪಾವಧಿ ಹಾಗು ದೀರ್ಘಾವಧಿಯ, ನವೀನ ಹಾಗು ಸೃಜನಶೀಲ ಯೋಜನೆಗಳನ್ನು ಸಹ ಪರಿಗಣಿಸಲಾಗುವುದು.**

## ಅನುದಾನಕ್ಕೆ ಆಯ್ಕೆಯಾದ ಶಿಕ್ಷಕರಿಂದ ನಿರೀಕ್ಷೆಗಳೇನೆಂದರೆ:

- ಮುಂದಿನ ದಿನಗಳಲ್ಲಿ ಅನುಷ್ಠಾನಕ್ಕೆ ತರಬಲ್ಲ ಒಂದು ಸಂಪೂರ್ಣ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಬೇಕು.
- ಯೋಜನೆಯು ಸರಿಯಾದ ಕ್ರಮದಲ್ಲಿ ನಡೆಯುತ್ತಿರುವುದನ್ನು ತೋರಿಸಲು ಕಾಲಕಾಲಕ್ಕೆ ಸರಿಯಾದ ದಾಖಲೆಗಳನ್ನು ಸಂಸ್ಥೆಗೆ ಒದಗಿಸಬೇಕು. (ಧಾಖಲೆಗಳು ಛಾಯಾಚಿತ್ರ/ಆಡಿಯೋ/ ವಿಡಿಯೋ/ವರದಿಯ ರೂಪದಲ್ಲಿರಬೇಕು)
- ಯೋಜನಾ ಅವಧಿಯಲ್ಲಿ ಮಧ್ಯಂತರ ವರದಿ ಹಾಗು ಯೋಜನೆಯ ಕೊನೆಯಲ್ಲಿ ಸಮಗ್ರ ವರದಿಯನ್ನು, ದಾಖಲೆ ಸಮೇತ ಸಲ್ಲಿಸಬೇಕು. ಯೋಜನಾ ಅವಧಿಯ ನಂತರ ಹಣಕಾಸಿನ ವರದಿಯ ಜೊತೆ ಯೋಜನೆಯ ಸಂಪೂರ್ಣ/ಸವಿಸ್ತಾರ ವರದಿ ಸಲ್ಲಿಸಬೇಕು. ಅಂತಿಮ ವರದಿಯಲ್ಲಿ ಅನುದಾನ ಸಂಭಂದಿದ ಚಟುವಟಿಕೆಗಳು, ಎದುರಾದ ಸಮಸ್ಯೆಗಳು ಮತ್ತು ಕಲಿಕೆಗಳನ್ನು ದಾಖಲಿಸಬೇಕು.

## ಯೋಜನಾ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆಯ ಮಾರ್ಗಸೂಚಿ:

ನಿಮ್ಮ ಯೋಜನೆಯು ಈ ಕೆಳಕಂಡ ವಿಷಯಗಳ ವಿವರಗಳನ್ನು ಒಳಗೊಂಡಿರಬೇಕು.

- ನಿಮ್ಮ ಯೋಜನೆಯ ಕಲ್ಪನೆ ನೀವು ಕೆಲಸ ಮಾಡುತ್ತಿರುವ ಶಾಲೆಗೆ ಸಂಬಂಧಿಸಿದಂತೆ ಆಗಿರಬೇಕು.
- ಪ್ರಸ್ತುತ ನೀವು ನಿರ್ವಹಿಸುತ್ತಿರುವ ಪಾತ್ರ ಮತ್ತು ಜವಾಬ್ದಾರಿಗಳು.
- ನಿಮ್ಮ ಪ್ರಸ್ತಾವಿತ ಕೆಲಸದ ಯೋಜನೆ ಹಾಗು ಶಾಲೆಯಲ್ಲಿ ನೀವು ಬಳಸುವ ವಿಧಾನದ ವಿವರ
- ನಿಮ್ಮ ಯೋಜನೆಯ ಫಲಿತಾಂಶವು ಕಲಾ ಶಿಕ್ಷಣ ಕ್ಷೇತ್ರಕ್ಕೆ ಯಾವ ರೀತಿ ಕೊಡುಗೆ ನೀಡುತ್ತದೆ ಎಂಬ ವಿವರ
- ಯೋಜನೆಯ ನೀರೀಕ್ಷಿತ ಕಾಲಾವಧಿ. ನಿಮ್ಮ ಯೋಜನೆಯು ಕನಿಷ್ಟ ಒಂಬತ್ತು ತಿಂಗಳದ್ದಾಗಿರಬೇಕು ಹಾಗು ಗರಿಷ್ಟ ೧೮ ತಿಂಗಳ ಅವಧಿಯದ್ದಾಗಿರಬೇಕು.
- ಯೋಜನಾವಧಿಗೆ ಬೇಕಾದ ಹಣಕಾಸಿನ ವಿವರ
- ನಿಮ್ಮ ಯೋಜನೆಯನ್ನು ಕನ್ನಡ, ಉರ್ದು, ಹಿಂದಿ ಹಾಗು ಇಂಗ್ಲೀಷ್ ಭಾಷೆಯಲ್ಲಿ ಬರೆಯುಬಹುದು.

## ಬಜೆಟ್:

- ರೂ. 1,00,000/- ವರೆಗೆ ಧನಸಹಾಯ ದೊರೆಯುತ್ತದೆ.
- ಪ್ರತಿ ಬಜೆಟ್ ಯೋಜನೆಗೆ ಸಂಬಂಧಿಸಿದ ನಿರ್ಧಿಷ್ಟ ಖರ್ಚು ವೆಚ್ಚಗಳ ವಿವರ ಹೊಂದಿರಬೇಕು.
- ಯೋಜನೆಗೆ ಸಂಬಂಧಿಸಿದ ವೈಯಕ್ತಿಕ ಖರ್ಚು, ಪ್ರಯಾಣ ಹಾಗು ಚಟುವಟಿಕೆಗಳ ವಿವರ ಹೊಂದಿರಬೇಕು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಅಗತ್ಯವಿರುವ ನೂತನ ಉಪಕರಣಗಳನ್ನು ಮತ್ತು ವಸ್ತುಗಳನ್ನು ಕೊಳ್ಳಲು ಅವಕಾಶವಿರುತ್ತದೆ.
- ಸಾಂಸ್ಥಿಕ ಖರ್ಚು ವೆಚ್ಚಗಳು, ಕಟ್ಟಡದ ಖರ್ಚು ವೆಚ್ಚಗಳು ಮತ್ತು ಹೊಸ ಕಾಮಗಾರಿಗಳಿಗಾಗಿ ಅನುದಾನವಿರುವುದಿಲ್ಲ.
- ಇಡೀ ಯೋಜನಾವಧಿಗೆ ನಿಮ್ಮ ಗೌರವಧನ ಹತ್ತು ಸಾವಿರ ಮೀರಿರಬಾರದು. ಹೊರಗಿನ ಸಂಪನ್ಮೂಲ ವ್ಯಕ್ತಿಗಳ ಗೌರವಧನ ೨೦ ಸಾವಿರ ಮೀರಿರಬಾರದು.

## ಗಡವು

- ಯೋಜನೆಗೆ ಸಂಭಂದಪಟ್ಟ ಪ್ರಶ್ನೆಗಳಿದ್ದಲ್ಲಿ, ನಿಮ್ಮ ಹೊಳಹುಗಳ ಬಗ್ಗೆ ಚರ್ಚಿಸಬಯಸಿದಲ್ಲಿ ಅಥವಾ ನಿಮ್ಮ

ಕರಡು ಪ್ರಸ್ತಾವನೆಯನ್ನು ನಮಗೆ ಕಳುಹಿಸ ಬಯಸಿದಲ್ಲಿ **June 23, 2017**ರ ಒಳಗೆ ನಮ್ಮನ್ನು ಸಂಪರ್ಕಿಸಿ.

- ನಿಮ್ಮ ಅಂತಿಮ ಪ್ರಸ್ತಾವನೆಯು ಲಕೋಟೆಯಲ್ಲಿ **July 28, 2017**ರ ಒಳಗೆ ನಮಗೆ ಸೇರಬೇಕು.
- ಕೊನೆಯ ದಿನಾಂಕದ ಮೊದಲು ನಿಮ್ಮ ಪ್ರಸ್ತಾವನೆಯು ಐ.ಎಫ್.ಎ ಗೆ ತಲುಪಲು ನೀವೇ ಜವಾಬ್ದಾರರಾಗಿರುತ್ತೀರಿ. ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
- ನಿಮ್ಮ ಪ್ರಸ್ತಾವನೆ ಆಯ್ಕೆಯಾದಲ್ಲಿ ನಿಗಧಿಪಡಿಸಿದ ದಿನಾಂಕದಂದು ಖುದ್ದು ಚರ್ಚೆಗೆ ಬರಬೇಕು.
- **September 12, 2017** ಕ್ಕೆ ಅನುದಾನದ ಪಟ್ಟಿಯನ್ನು ನಿರೀಕ್ಷಿಸಬಹುದು

ನಿಮ್ಮ ಅರ್ಜಿ, ಪ್ರಸ್ತಾವನೆ ಅಥವಾ ಪ್ರಶ್ನೆಗಳನ್ನು krishna@indiaifa.org ಗೆ ಕಳುಹಿಸಲು ಕೋರಲಾಗಿದೆ.

ಕೃಷ್ಣಮೂರ್ತಿ. ಟಿ.ಎನ್
ಕಾರ್ಯಕ್ರಮ ಕಾರ್ಯನಿರ್ವಾಹಕ– ಕಲಾ ಶಿಕ್ಷಣ
ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್,
ಅಪೂರ್ವ, ನೆಲಮಹಡಿ
ನಂ. ೨೫೯, ೪ನೇ ಕ್ರಾಸ್,
ರಾಜ ಮಹಲ್ ವಿಲಾಸ್, ೨ನೇ ಹಂತ,
೨ನೇ ಬ್ಲಾಕ್,
ಬೆಂಗಳೂರು ೫೬೦೦೯೪

ದೂರವಾಣಿ: ೮೭೬೨೯ ೫೪೦೮೦
೦೮೦–೨೩೪೧ ೪೬೮೧/೮೨

೨೦೧೬–೧೭ರ ಅನುದಾನವನ್ನು CITY India ಬೆಂಗಳೂರು ಇವರು ಬೆಂಬಲಿಸುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಕೆಳಗೆ ನೀಡಿರುವ ಕಲಿ–ಕಲಿಸು ಸಂಪರ್ಕಜಾಲಕ್ಕೆ ಭೇಟಿ ನೀಡಿ.
http://www.indiaifa.org/programmes/arts-education.html